ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಂಸ್ಥಾನಾಮಳಿ ಪ್ರತಿಯೊಂದು ಪಂಚಾಯ್ತಿಗೂ ಕೂಡ ಸೆಕ್ರೆಟರಿಯವರನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದೀರಿ. ಕೆಲವು ಕಡೆ ಮಾಡಿದ್ದೀರಿ, ಕೆಲವು ಕಡೆ ಮಾಡಿಲ್ಲ. ಮಾಡದೇ ಇರುವ ಪಂಚಾಯ್ತಿಗಳಲ್ಲಿ ಹತ್ತಾರು ವರ್ಷಗಳ ಕಾಲದ ಕಂದಾಯ ಬಾಕಿ ವಸೂರಾಗದೆ ಇದೆ. ಆಡಿಟ್ ಕೂಡ ಆಗಿಲ್ಲ, ಪಂಚಾಯ್ತಿಯ ಸ್ಥಿತಿ ಬಹಳವಾಗಿ ಕೆಟ್ಟು ಹೋಗುತ್ತಾ ಇದೆ. ಆದ್ದರಿಂದ ಯಾವಾಗ ಸೆಕ್ರೆಟರಿಗಳನ್ನು ಈ ಪಂಚಾಯ್ತಿಗಳಿಗೆ ಹಾಕುತ್ತೀರಿ?

ಶ್ರೀ ಆರ್. ಎಂ. ಪಾಟೀಲ್.—ಜಾಗ್ರತೆ ಹಾಕಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಂಚಾಯ್ತಿ, ಸೆಕ್ರೆಟರಿ ಆಗಲಿ, ಶ್ಯಾನುಭೋಗರು ಆಗಲಿ ಯಾರೂ ಕೂಡ ಕೆಲಸ ಮಾಡದೇ ಪಂಚಾಯ್ತಿಗಳಲ್ಲಿ ಕಂದಾಯ ವಸೂಲಾಗದೆ ಬಾಕಿ ನಿಂತುಹೋಗಿದೆ, ಇವತ್ತು ಗಾಮದಲ್ಲಿ ಯಾವ ರೆಕ್ಕಪತ್ರಗಳೂ ಸಿಕ್ಕುತ್ತಾ ಇಲ್ಲ. ಯಾರೂ ಕೇಳುವವರು ಹೇಳುವವರೇ ಇಲ್ಲದಂತಾಗಿದೆ. ಇದನ್ನು ಯಾವಾಗ ನರಿಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಿ?

ಶ್ರೀ ಆರ್. ಎಂ. ಪಾಟೀಲ್.—ಇಂತಹ ಗ್ರಾಮದಲ್ಲಿ ಈ ರೀತಿಯಾಗಿದೆ ಎಂದು ಹೇಳಿದರೆ ಅದನ್ನು ನರಿಮಾಡಬಹುದು. ಹಾಗಲ್ಲದೆ ಈ ರೀತಿಯಾಗಿ ಹೇಳುವುದರಿಂದ ಕೇವಲ ಅವರ ಮನಸ್ಸಿನಲ್ಲಿರುವ ಒಂದು ಬಯಕೆಯನ್ನು ತೋರಿಸಿದ ಹಾಗೆ ಆಗುತ್ತದೆಯೇ ಹೊರತು ಸುಧಾರಣೆ ಮಾಡಿಸಿದಂತೆ ಏನೂ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ತಾಲ್ಲೂಕು ಲಲಿತಾದ್ರಿ ಗ್ರಾಮದಲ್ಲಿ ಪಂಚಾಯ್ತಿ ಸೆಕ್ರೆಟರಿ ನೇಮಕಮಾಡಿ ಎಷ್ಟೋ ದಿವಸ ಆಯಿತು. ಇಷ್ಟತ್ತನವರೆಗೂ ಅವನು ಆಫೀಸಿಗೆ ಅಲೆಯುತ್ತಾ ಇದ್ದಾನೆಯೇ ಹೊರತು ಯಾವ ಕೆಲಸವೂ ಆಗುತ್ತಾ ಇಲ್ಲ.

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri R. S. HEGDE.—Some of the Panchayat Secretaries have put in more than 20 years service and they have reached superannuation stage. Who is to decide their efficiency if they are to be absorbed in the regular cadre?

Sri R. M. PATIL.—Under the rules some authority will be appointed and necessary action will be taken.

ಶ್ರೀ ಎಸ್. ಎಂ. ಗುರೆಡ್ಡಿ.—ಪಂಚಾಯ್ತಿ ಸೆಕ್ರೆಟರಿಯಾಗಿ ಅನೇಕ ವರ್ಷಗಳಿಂದ ಅನೇಕರು ಕೆಲಸಮಾಡುತ್ತಾ ಇದ್ದಾರೆ. ಅವರಿಗೆ ಈಗಿನ ಬೆಲೆ ಏರಿಕೆಗೆ ಅನುಗುಣವಾಗಿ ಡಿ. ಎ. ಆಗಲಿ ಅಥವಾ ಇನ್‌ಕ್ರಿಮೆಂಟಾಗಲಿ ಕೊಡುತ್ತಾ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಮುಂಬೈ ಕರ್ನಾಟಕದಲ್ಲಿ ಯಾರ್ಯಾರು ಪಂಚಾಯ್ತಿ ಸೆಕ್ರೆಟರಿಯಾಗಿ ನೇಮಕವಾಗಿದ್ದಾರೋ ಅವರಿಗೆ ಪಂಚಾಯ್ತಿ ಫಂಡ್‌ನಿಂದ ಪ್ರತಿಯೊಬ್ಬರಿಗೂ ಹತ್ತು ರೂಪಾಯಿ ಡಿ. ಎ. ಕೊಡಬೇಕೆಂದು ಹುಕುಂ ಆಗಿದೆ, ಅದನ್ನು ಎಷ್ಟೋ ಪಂಚಾಯ್ತಿಯವರು ಈಗಾಗಲೇ ಕಾರ್ಯರೂಪಕ್ಕೆ ತಂದಿದ್ದಾರೆ ಇನ್ನೊಂದು ವಿಷಯ ಎಂದರೆ, ಮುಂಬೈ ರಾಜ್ಯದ ಕಾನೂನು ಪ್ರಕಾರ ಪಂಚಾಯ್ತಿಯವರಿಗೆ ಅಧಿಕಾರ ಇದ್ದುದರಿಂದ ಅವರು ತಮ್ಮ ಊರಿನೊಳಗೆ ಯಾವ ಮನುಷ್ಯನನ್ನು ಬೇಕಾದರೂ ಸೆಕ್ರೆಟರಿಯಾಗಿ ತೆಗೆದುಕೊಂಡು ಅದಕ್ಕೆ ಪಾರ್ಟ್‌ಟೈಂ ಸೆಕ್ರೆಟರಿ ಅಂತ ಮಾಡಿಕೊಂಡಿದ್ದಾರೆ, ಅದು ಇರ್ರೆಗ್ಯುಲರ್ ಆಗುತ್ತದೆ, ಅವರನ್ನು ಸರ್ಕಾರದ ಅಧಿಕಾರಿ ಎಂದು ಹೇಳುವುದು ಸಮಂಜಸವಾಗಲಾರದು ಮತ್ತು ಅವರಿಗೆ ಸರ್ಕಾರಿ ನೌಕರರಿಗೆ ಸಿಕ್ಕತಕ್ಕ ಸೌಲತ್ತು ಆಗಲಿ ಅನುಕೂಲವಾಗಲಿ ಸಿಕ್ಕುವುದಿಲ್ಲ.

Mr. SPEAKER.—Question No. 531 is held over as the Hon'ble Minister is absent. Next Question.

Export of ore from Bisgod Mines.

*Q.—641. Sri S. P. PHAYDE (Ankola).—

Will the Minister for Industries and Commerce be pleased to state:—

(a) the quantity of ore exported from Bisgod Mines in Yellapur of North Kanara District for the last three years (yearwise details may be supplied);

(*b*) whether it is not a fact that the condition of the road through which ores from this Mines are exported is very bad due to heavy traffic and if so, what action has been taken to improve and maintain the said road ;

(*c*) whether it is not a fact that representations are being made for a long time for improvements of the ore exporting road from Bisgod Mines ;

(*d*) the action taken in this regard ?

A.—Sri MAQSOOD ALIKHAN (Deputy Minister for Mines and Geology).—

(*a*) The ore exported from the Bisgod Mines in Yellapur during the last four years is as below :—

1962-63	...	4,780 tonnes
1963-64	...	Nil
1964-65	...	30,380 tonnes
1965-66	...	10,384 tonnes.

(*b*) The Board of Mineral Development is using only the road between Bisgod and Yellapur for transporting the ore mined at the Bisgod Mines. This is a heavy rainfall area and annual repairs to the road have to be done. The Board has spent Rs. 4,288 in 1964-65 and Rs. 5,000 in 1965-66 on improving the Bisgod-Yellapur Road. In the present stage of the mine and its level of production, Board of Mineral Development is unable to do anything more.

(*c*) The Hon'ble Member had represented in December 1964 regarding improvements to the ore carrying road between Yellapur-Bareballi.

(*d*) The Board of Mineral Development is using less than one-third the length of road, *i.e.*, from Bisgod to Yellapur. The road is being used also by Messrs. Doddanavar Bros. and Forest contractors. The Board is maintaining that portion of the road used by it. However, P.W.D. have been requested to improve the road and maintain it in good condition.

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಮುರಂ ರಸ್ತೆಯು ಈಗ ಪಿ. ಡಬ್ಲ್ಯು. ಡಿ. ಅವರ ನಿಗಾವಣೆಯಲ್ಲಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

†Sri MAQSOOD ALIKHAN.—That is a murum road under the supervision of the P.W.D.

ಶ್ರೀ ಎಸ್. ಪಿ. ಫಾಯದೆ.—ಈ ರಸ್ತೆಯಲ್ಲಿ ವಿಶೇಷವಾಗಿ ವಾಹನ ಸಂಚಾರ ಇರುವುದರಿಂದ ಇದಕ್ಕೆ ಸಾಕಷ್ಟು ರಿಪೇರಿಯಿಲ್ಲದ ಕಾರಣ ಇದು ಬಹಳವಾಗಿ ಕೆಟ್ಟಿದೆ ಎಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

Sri MAQSOOD ALIKHAN.—It is quite known that there is heavy traffic of ore and apart from that there is traffic of the Forest Department also and on account of that, the road gets worn out. So far as the Board of Mineral Development is concerned, they are taking every measure to see that the road up to their point is repaired now and then.

ಶ್ರೀ ಎಸ್. ಪಿ. ಘಾಯದೆ.—ಈ ರಸ್ತೆಯನ್ನು ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನವರು ವಿಶೇಷವಾಗಿ ಬಳಸುತ್ತಿರುವುದರಿಂದ ಸರ್ಕಾರದವರು ಇದನ್ನು ದುರಸ್ತಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri MAQSOOD ALIKHAN.—From the Mines to Yellapur the P.W.D. has prepared estimates to the tune of Rs. 8 lakhs and the estimates have been sent to the Superintending Engineer. It could not be taken up due to paucity of funds and when funds are available, I think the P.W.D. will take it up.

ಶ್ರೀ ಎಸ್. ಪಿ. ಘಾಯದೆ.—ಈ ರಸ್ತೆಗೆ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನವರೂ ಮತ್ತು ಪಿ. ಡಬ್ಲ್ಯು. ಡಿ. ಇಬ್ಬರೂ ಖರ್ಚುಮಾಡುತ್ತಿದ್ದರೆ, ಯಾರು ಕೆಲಸಮಾಡುತ್ತಾರೆ ಎಂಬು ದನ್ನು ಹೇಗೆ ಕಂಡುಹಿಡಿಯುವುದು ?

Sri MAQSOOD ALIKHAN.—So far as the P.W.D. is concerned, they have got their own method of checking up. The Board is spending a little amount of Rs. 5,000 to repair pot holes and for servicing. We have got our own method of checking up.

———

Drawing of Sub-transmission Line for supply of Electricity.

*Q.—632. Sri H. D. DEVE GOWDA (Holenarasipur).—

Will the Minisiter for Public Works be pleased to state :—

(*a*) whether representations have been made to the Mysore State Electricity Board with a request to draw a sub-transmission line from Holenarasipur up to Doddahally for supply of electricity to Irrigation Pumpsets and to electrify the villages of Hally Mysore Hobli in Holenarasipur taluk;

(*b*) whether any estimate has been prepared by the Mysore State Electricity Board in this behalf;

(*c*) if so, the cost of the same;

(*d*) whether action would be taken to execute the work of drawing the sub-transmission line from Holenarasipur to Doddahally during 1966-67 ?

A.—Sri G. B. SHANKAR RAO (Parliamentary Secretary to the Minister for Public Works).—

(*a*) No.

(*b*) No.

(*c*) and (*d*) Does not arise.

ಶ್ರೀ ಎಚ್. ಡಿ. ದೇವೇಗೌಡ.—ವಿದ್ಯುತ್ ಮಂಡಲಯವರಿಗೆ ಮನವಿಗಳು ಬಂದಿಲ್ಲ ಎಂಬುದಾಗಿ ಉತ್ತರದಲ್ಲಿ ಹೇಳಿದೆ. ಅಂದರೆ ಇದುವರೆಗೂ ಅಸೆಂಬ್ಲಿಯ ಸದಸ್ಯರುಗಳಿಂದ ಹಾಗೂ ತಾಲ್ಲೂಕ್ ಬೋರ್ಡ್ ಮೆಂಬರುಗಳಿಂದ ಮನವಿಗಳು ಸರ್ಕಾರಕ್ಕೆ ಬಂದಿಲ್ಲವೇ ?

Sri G. B. SHANKAR RAO.—The question is whether representations were received by the Electricity Board. So far as the Government is concerned, we are not aware of any such representation received. Now, that the member has made a representation, we take note of it.